**ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಡೂರು**

**ಸಿ.ಸಿ. 212/2020**

**ಫಿರ್ಯಾದುದಾರರುಃ ಯಗಟಿ ಪೊಲೀಸ್ ಠಾಣೆ**

**ವಿರುದ್ಧ**

**ಆರೋಪಿ : ಶಶಿ ಮತ್ತು ಇತರರು**

**ದೋಷಾರೋಪಣೆ**

**ಶ್ರೀ. ಅರವಿಂದ್ರ ಬಿ.ಸಿ, ಬಿ.ಎ.ಎಲ್.ಎಲ್.ಬಿ,** ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಡೂರು ಆದ ನಾನು ಈ ಕೆಳಕಂಡ ಆರೋಪಿತರುಗಳಾದ,

1. ಶಶಿ @ ಶೇಷಪ್ಪ ಬಿನ್ ಗೋವಿಂದಪ್ಪ
ವಯಸ್ಸು ಸುಮಾರು 32 ವರ್ಷ
ವಾಸಃ ವಿನೋಬನಗರ,
ಅಜ್ಜಂಪುರ,
ಚಿಕ್ಕಮಗಳೂರು ಜಿಲ್ಲೆ.
2. ಶ್ರೀಮತಿ ಗಂಗಮ್ಮ ಕೋಂ ಸಿದ್ದರಾಮಪ್ಪ
ವಯಸ್ಸು ಸುಮಾರು 50 ವರ್ಷ,
ಕೇದಿಗೆರೆ ಗ್ರಾಮ, ಕಡೂರು ತಾಲ್ಲೂಕು.
3. ಸಿದ್ದರಾಮಪ್ಪ ಬಿನ್ ಹನುಮಪ್ಪ ,
ವಯಸ್ಸು ಸುಮಾರು 60 ವರ್ಷ,
ಕೇದಿಗೆರೆ ಗ್ರಾಮ, ಕಡೂರು ತಾಲ್ಲೂಕು.

**ನಿಮ್ಮ ಮೇಲೆ ದೋಷಾರೋಪಣೆ ಹೊರಿಸುವುದೇನೆಂದರೆ,**

ದಿನಾಂಕಃ 06.08.2019 ರಂದು ಮದ್ಯಾಹ್ನ 1.00 ಗಂಟೆ ಸಮಯದಲ್ಲಿ ಯಗಟಿ ಪೊಲೀಸ್ ಠಾಣಾ ಸರಹದ್ದಿನಲ್ಲಿರುವ ಕೇದಿಗೆರೆ ಗ್ರಾಮದಲ್ಲಿ ಚಾಸಾ 1 ಮತ್ತು ಅವರ ತಾಯಿ ಮನೆಯಲ್ಲಿರುವಾಗ ಆರೋಪಿತರಾದ ನೀವು ಚಾಸಾ-1 ರವರು ಯಗಟಿ ಪೊಲೀಸ್ ಠಾಣೆಗೆ ದೂರುಕೊಟ್ಟಿದ್ದೀರಾ ಎಂದು ಒಂದನೇ ಆರೋಪಿ ಬೇವರ್ಸಿ ಮುಂಡೆ, ಸೂಳೆಮುಂಡೆ ಎಂದು ಹಾಗೂ ಆರೋಪಿ 2 ಮತ್ತು 3 ರವರು ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಶಾಂತಿ ಭಂಗ ಉಂಟುಮಾಡಲು ಉದ್ರೇಕಿಸುವ ಉದ್ದೇಶದಿಂದ ಅವಮಾನ ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ 34 ರ ರೀತ್ಯ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರೆಂದು ದೂಷಿಸಲಾಗಿದೆ.

ಎರಡನೇಯದಾಗಿ ಸದರಿ ದಿನಾಂಕ, ವೇಳೆ ಮತ್ತು ಸ್ಥಳದಂದು ಆರೋಪಿಯಾದ ನೀವು ಚಾಸಾ 1 ರವರಿಗೆ ಆರೋಪಿಯಾದ 2 ಮತ್ತು 3 ರವರು ಕಾಲಿನಿಂದ ಮೈಕೈಗೆ ಹೊಡೆದು ಸ್ವಇಚ್ಛೆಯಿಂದ ಹಲ್ಲೆಮಾಡಿ ಗಾಯಪಡಿಸಿದ್ದೀರಿ ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ 34 ರ ರೀತ್ಯ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರೆಂದು ದೂಷಿಸಲಾಗಿದೆ.

ಮೂರನೇಯದಾಗಿ ಸದರಿ ದಿನಾಂಕ, ವೇಳೆ ಮತ್ತು ಸ್ಥಳದಂದು ಒಂದನೇ ಆರೋಪಿಯಾದ ನೀವು ಚಾಸಾ 1 ರವರಿಗೆ ದೊಣ್ಣೆಯಿಂದ ಹೊಡೆದು ಸ್ವಇಚ್ಛೆಯಿಂದ ಗಾಯ ಉಂಟುಮಾಡಿರುತ್ತೀರಿ ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 324 ಸಹವಾಚಕ 34 ರ ರೀತ್ಯ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರೆಂದು ದೂಷಿಸಲಾಗಿದೆ.

ಕೊನೆಯದಾಗಿ ಸದರಿ ದಿನಾಂಕ, ವೇಳೆ ಮತ್ತು ಸ್ಥಳದಂದು ಆರೋಪಿತರಾದ ನೀವು ಚಾಸಾ-1 ರವರಿಗೆ ಅಪಾಯದ ಭೀತಿ ಹುಟ್ಟಿಸುವ ಉದ್ದೇಶದಿಂದ ಕೊಲೆ ಮಾಡುತ್ತೇವೆಂದು ನಿನ್ನನ್ನು ಕೊಲೆ ಮಾಡದೇ ಬಿಡುವುದಿಲ್ಲ ಎಂದು ಪ್ರಾಣಬಿದರಿಕೆ ಹಾಕಿರುತ್ತೀರಿ. ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಕ 34 ರ ರೀತ್ಯ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರೆಂದು ದೂಷಿಸಲಾಗಿದೆ.

(ಈ ಮೇಲೆ ಹೇಳಿದ ಆರೋಪಗಳು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಬರುತ್ತಿದ್ದು, ಈ ಆರೋಪಗಳಿಗಾಗಿ ನೀವು ಈ ನ್ಯಾಯಾಲಯದಿಂದ ವಿಚಾರಣೆಗೆ ಒಳಪಡತಕ್ಕದೆಂದು ಈ ಮೂಲಕ ನಾನು ನಿರ್ದೇಶಿಸುತ್ತೇನೆ.)

Sd/-
**ಒಂದನೇ ಹೆಚ್ಚುವರಿ ಸಿವಿಲ್**
**ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ**
**ನ್ಯಾಯಿಕ ದಂಡಾಧಿಕಾರಿಗಳು, ಕಡೂರು.**